# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/23/2020-21 ದಿನಾಂಕ: 22.03.2021

**-:ದಿನಾಂಕ:20-03-2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:20.03.2021ರ ಶನಿವಾರ ಮಧ್ಯಾಹ್ನ 2.30 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 5. | ಎಸ್.ಕೆ.ವೆಂಕಟೇಶ್ | ಅಯ್ಯಪ್ಪನಗರ | ಹಾಜರಿದ್ದರು. |
| 6. | ಶ್ರೀ.ಟಿ.ಆರ್.ಸತೀಶ್ | ಆರ್.ಡಬ್ಲ್ಯೂ.ಎ. ಅದಯ್ಯಪ್ಪನಗರ | ಹಾಜರಿದ್ದರು. |
| 7. | ಶ್ರೀ.ನರೇಂದ್ರ ಕುಮಾರ್ | ಹೂಡಿ | ಹಾಜರಿದ್ದರು. |
| 8. | ಶ್ರೀ.ರಾಜೇಶ್ | ಹೂಡಿ | ಹಾಜರಿದ್ದರು. |
| 9. | ಶ್ರೀ.ಸಿ.ಪಿ.ಪಾಟೀಲ್ | ಅಯ್ಯಪ್ಪನಗರ | ಹಾಜರಿದ್ದರು. |
| 10. | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 11. | ಶ್ರೀಮತಿ.ಸುಜಾತ.ಬಿ | ಅಯ್ಯಪ್ಪನಗರ | ಹಾಜರಿದ್ದರು. |
| 12. | ಶ್ರೀ.ಮಾದೇಶ್ | ಸಾದರಮಂಗಳ | ಹಾಜರಿದ್ದರು. |
| 13. | ಶ್ರೀ.ಡಾ//ಸುರೇಶ್ | ಪಶುಪಾಲನೆ | ಹಾಜರಿದ್ದರು. |
| 14. | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |
| 15. | ಶ್ರೀ.ಎಚ್.ಎಂ.ರಂಗನಾಥ್ | ಎಇ ಮೇಜರ್ ರೋಡ್ | ಹಾಜರಿದ್ದರು. |
| 16 | ಶ್ರೀ.ಎಚ್.ವಿ.ಮಂಜುನಾಥ್ | ಹೂಡಿ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಸುಜಾತ ಅಯ್ಯಪ್ಪನಗರ 3ನೇ ಬ್ಲಾಕ್ ರವರು ರಸ್ತೆ ಪಕ್ಕದ ಚರಂಡಿಗಳಲ್ಲಿ ಕಸ ಮತ್ತು ಮಣ್ಣು ತುಂಬಿರುತ್ತದೆಂದು ತಿಳಿಸಿರುತ್ತಾರೆ ಹಾಗೂ ಪಾಟೀಲ್ ರವರು ಅಯ್ಯಪ್ಪನಗರ ನಮ್ಮ ವ್ಯಾಪ್ತಿಯಲ್ಲಿ ಒಂದುವಾರ ಟ್ರ್ಯಾಕ್ಟರ್ ಕಳುಹಿಸಲು ಕೋರಿರುತ್ತಾರೆ.
- ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸದ್ಯ ಪರಿಸ್ಥಿತಿಯಲ್ಲಿ ಒಂದು ಟ್ರ್ಯಾಕ್ಟರ್‌ನಿಂದ ಅಯ್ಯಪ್ಪನಗರ ಸುತ್ತ ಮುತ್ತಲು Silt & Tractor ಕೆಲಸ ನಿರ್ವಹಿಸುತ್ತಿರುತ್ತಾರೆ ಹಾಗೂ ಒಂದು ಬ್ಲಾಕ್‌ವಾರು ಸಂಪೂರ್ಣವಾಗಿ ಪ್ರತಿ ದಿನದಂತೆ ಕಸ ಮತ್ತು ಮಣ್ಣು ತೆಗೆಯಲು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಸುಜಾತ ಅಯ್ಯಪ್ಪನಗರ 3ನೇ ಬ್ಲಾಕ್ ರವರು ಅಯ್ಯಪ್ಪನಗರ ರಸ್ತೆ ಪಕ್ಕದಲ್ಲಿ ಮರಗಳಿಂದ ಬರುವ ಎಲೆಗಳನ್ನು ಗುಡಿಸಿ ಅಲ್ಲಿಂದ ತೆಗೆಯಬೇಕೆಂದು ಕೋರಿರುತ್ತಾರೆ.
- ಆರೋಗ್ಯಸ್ವಾಮಿ ರವರು ರಸ್ತೆ ಪಕ್ಕದಲ್ಲಿ ಕಸವನ್ನು ಹಾಕುತ್ತಾರೆಂದು ತಿಳಿಸಿರುತ್ತಾರೆ.
- ಅಧ್ಯಕ್ಷರು ಮನೆಗಳಿಂದ ಕಸ ಕೊಡದಿರುವವರಿಗೆ ದಂಡ ಹಾಕಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿರುತ್ತಾರೆ. ಮತ್ತು ಅಧ್ಯಕ್ಷರು ಕಸವನ್ನು ಕೊಡದಿರುವ ಮನೆಗಳನ್ನು ಮಾರ್ಷಲ್, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಸ್ಥಳ ಪರಿಶೀಲಿಸಿ ಮುಂದಿನ ಸಭೆಗೆ ವಿಷಯ ತಿಳಿಸಲು ಸೂಚಿಸಿರುತ್ತಾರೆ.
- ಪಾಟೀಲ್ ಅಯ್ಯಪ್ಪನಗರ ರವರು ಶಿರಿಡಿ ಬಡಾವಣೆಯಲ್ಲಿ ಡ್ರೈ ವೇಸ್ಟ್ ರವರು ಸರಿಯಾಗಿ ಡ್ರೈ ಕಸ ಸಂಗ್ರಹಿಸುತ್ತಿರುವುದಿಲ್ಲ ಎಂದು ಕೋರಿರುತ್ತಾರೆ.
- ಅಧ್ಯಕ್ಷರು ಹಸಿ ತ್ಯಾಜ್ಯ ಸಂಗ್ರಹಕರಿಗೆ ಹಾಗೂ ಡ್ರೈ ತ್ಯಾಜ್ಯ ಸಂಗ್ರಹಕರಿಗೆ ಶೋಕಾಸ್ ನೋಟಿಸ್ ನೀಡಲು ಸೂಚಿಸಿರುತ್ತಾರೆ ಹಾಗೂ ಮುಂದಿನ ವಾರದ ಬುಧುವಾರ ಅಥವಾ ಗುರುವಾರ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಭೈರತಿ ಭಾಗದ ಸ್ಥಳ ವೀಕ್ಷಣೆಗೆ ಸೂಚಿಸಿರುತ್ತಾರೆ

**ವಿದ್ಯುತ್:-**

- ಪ್ರಸಾದ್ ಕೊಡಿಗೇಹಳ್ಳಿ ರವರು ಹೂಡಿ ಸರ್ಕಲ್‌ನಲ್ಲಿನ ಹೈ ಮಾಸ್ಕ್ ಲೈಟ್ ರಿಪೇರಿ ಹಾಗೂ ಎಸ್.ಕೆ ವೆಂಕಟೇಶ್ ರವರು ಸಾದರಮಂಗಳದ ಸರ್ಕಲ್‌ನಲ್ಲಿ ಹೈ ಮಾಸ್ಕ್ ಲೈಟ್ ಬೇರೆ ಕಡೆಗೆ ಸ್ಥಳಾಂತರಿಸಲು ಕೋರಿರುತ್ತಾರೆ.
- ಸತೀಶ್ ಅಯ್ಯಪ್ಪನಗರ ರವರು ಓಂ ಶಕ್ತಿ ಲೇಔಟ್‌ನಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಎಸ್.ಕೆ ವೆಂಕಟೇಶ್ ರವರು ರೆಡ್ಡಿ ಕಾಂಪೌಂಡ್ ಪಕ್ಕದಲ್ಲಿನ ಬೀದಿ ದೀಪಕ್ಕೆ ಸ್ವಿಚ್ ಹಾಕಲು ಕೋರಿರುತ್ತಾರೆ.
- ಸುಜಾತ ಅಯ್ಯಪ್ಪನಗರ 3ನೇ ಬ್ಲಾಕ್ ರವರು ಮರಗಳನ್ನು ತೆಗೆಯಲು ಸಭೆಯಲ್ಲಿ ತಿಳಿಸಿದರು ಮತ್ತು ಸಾದರಮಂಗಳ ಮಾದೇಶ್ ರವರು ಸರ್ಕಾರಿ ಶಾಲೆ ರಸ್ತೆಯಲ್ಲಿ ಕಂಬಗಳು ಇರುವುದಿಲ್ಲ ಅದರಿಂದ ಕಂಬಗಳನ್ನು ಮತ್ತು Lights ಹಾಕಲು ಸಭೆಯಲ್ಲಿ ಕೋರಿದರು

**ಕಾಮಗಾರಿ ಇಲಾಖೆ:-**

- ಭೈರತಿ ಆರೋಗ್ಯ ಸ್ವಾಮಿ ರವರು ಭೈರತಿ ಮುಖ್ಯ ರಸ್ತೆಯಲ್ಲಿ ಮೇಜರ್ ರೋಡ್‌ನಲ್ಲಿ ಯಾವುದೇ ಕೆಲಸ ನಡೆದಿಲ್ಲಿ ಅದನ್ನು ಪೂರ್ಣಗೊಳಿಸಲು ವಾರ್ಡ್ ಅಧಿಕಾರಿಗೆ ತಿಳಿಸಿದರು.
- ಹೂಡಿ ಬಾಬಣ್ಣ ನವರು ಹೂಡಿ ಮುಖ್ಯ ರಸ್ತೆಯ ಬೇಕರಿ ಮುಂದೆ ಹೊಸ ಸ್ಲಾಬ್ ಯಾವುದೇ ಹಾಕಿರುವುದಿಲ್ಲ ಅದನ್ನು ಕೂಡಲೇ ಮೋರಿಗಳನ್ನು ಮುಚ್ಚಲು ನೋಡಲ್ ಅಧಿಕಾರಿಗಳಿಗೆ ಸೂಚಿಸಿದರು.
- ಸಭೆಯಲ್ಲಿ ಹೂಡಿ ಮಂಜುನಾಥ ಮತ್ತು ಸಾದರಮಂಗಳ ಎಸ್.ಕೆ ವೆಂಕಟೇಶ್ ರವರು TDR Files ಯಾವುದೇ ಮುಂದುವರಿದಿಲ್ಲ.
- ಹೂಡಿ ಮಂಜುನಾಥ್ ರವರು ಎಸ್‌ಡ್ಬ್ಯೂಡಿ ನ ರಾಜು ಕಾಲುವೆ ಕೊಡಿಗೇಹಳ್ಳಿ ರಸ್ತೆಯಲ್ಲಿ ತುಂಬಾ ಸಮಸ್ಯೆ ಇರುವುದರಿಂದ ಸ್ಲಾಬ್‌ಗಳನ್ನು ತೆರವುಗೊಳಿಸಲು ಸಮಿತಿ ಸಭೆಯಲ್ಲಿ ತಿಳಿಸಿದರು. ನೋಡಲ್ ಅಧಿಕಾರಿ ಸಾರ್ವಜನಿಕರಿಂದ ಪತ್ರ ಕೊಡಲು ತಿಳಿಸಿದರು.
- ಪ್ರಸಾದ್ ರವರು ದಿಯಾ ಶಾಲೆಯಲ್ಲಿ ರಾಜುಕಾಲುವೆ ಇದ್ದು ಶಾಲೆಯ ಮುಂದೆ ತುಂಬಾ ಸಮಸ್ಯೆಯಾಗಿರುತ್ತದೆ ಆದ್ದರಿಂದ ಎಸ್‌ಡ್ಬ್ಯೂಡಿ ಅಧಿಕಾರಿಗಳನ್ನು ಮುಂದಿನ ಸಭೆಗೆ ಹಾಜರಾಗಲು ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
- ಸತೀಶ್ ರವರು ಅಯ್ಯಪ್ಪನಗರದಲ್ಲಿ ಮುಖ್ಯ ರಸ್ತೆಯಲ್ಲಿ ಡಿವೈಡರ್‌ಗಳನ್ನು ಸರಿಪಡಿಸಲು ತಿಳಿಸಿದರು.
- ಪ್ರಸಾದ್ ರವರು ಕೊಡಿಗೇಹಳ್ಳಿ ಮುಖ್ಯ ರಸ್ತೆಯಲ್ಲಿ ಎರಡು ಕಡೆ ಮಣ್ಣು ಹಾಗೂ ಮೊರಿಗಳನ್ನು Cleaning ಮಾಡಲು ಸಭೆಯಲ್ಲಿ ತಿಳಿಸಿದರು. ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

**Animal Husbandry:-**

- ಅಯ್ಯಪ್ಪನಗರ ಮತ್ತು ಕೊಡಿಗೇಹಳ್ಳಿಯಲ್ಲಿ ಸತೀಶ್ ಮತ್ತು ಪ್ರಸಾದ್ ರವರು ಹಂದಿಗಳ ಹಾವಳಿಯಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಯಾದ ಡಾ//ಸುರೇಶ್ ರವರು ಸಭೆಯಲ್ಲಿ ಯಾವುದೇ ಟೆಂಡರ್‌ಗಳು ಆಗಿರುವುದಿಲ್ಲ ಅದರಿಂದ ಹಂದಿಗಳನ್ನು ಇಡಿಯಲು ಆಗುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಆದ್ದರಿಂದ ಸದ್ಯಕ್ಕೆ ಹಂದಿಗಳ Owner ಗಳಿಗೆ ನೋಟಿಸ್ ಕೊಡಲು ತಿಳಿಸಿದರು.

**ಪೋಲಿಸ್ ಇಲಾಖೆ:-**

- ಮುಂದಿನ ಸಮಿತಿ ಸಭೆಯಲ್ಲಿ ಪೋಲಿಸ್ ಟ್ರಾಫೀಕ್ ಅಧಿಕಾರಿಗಳು ಹಾಜರಾಗಲು ಅಧ್ಯಕ್ಷರು ತಿಳಿಸಿದರು.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ